"ನನ್ನ ತಾಯಿಯು ನನಗೋಸ್ಕರ ಉಪವಾಸ, ಪ್ರಾರ್ಥನೆ ಮುಂತಾದ ನೂರಾರು ವ್ರತಗಳನ್ನು ಮಾಡಿದ್ದಳು. ನನ್ನಿಂದ ಅವು ಯಾವುದನ್ನೂ ಮಾಡಲು ಸಾಧ್ಯವಿಲ್ಲ. ನನ್ನಲ್ಲಿ ಏನಾದರೂ ಒಳ್ಳೆಯತನ, ಧಾರ್ಮಿಕ ಪ್ರವೃತ್ತಿಯಿದ್ದರೆ ಅವು ನನ್ನ ತಾಯಿಯ ಬಳುವಳಿ.....ನಾನು ಜನ್ಮ ತಾಳುತ್ತೇನೆಂದು ತಿಳಿದು ನಮ್ಮ ತಾಯಿ ದೇಹ, ವಸ್ತ್ರ, ಆಹಾರ, ವಿಹಾರ, ಮನಸ್ಸುಗಳಲ್ಲಿ ಸಂತರಂತೆ ಪರಿಶುದ್ಧಳಾಗಿದ್ದಳು."

ಭಾರತೀಯರ ನಂಬುಗೆಯೆಂದರೆ, ಮಗುವು ಪೂಜಾದಿಗಳ ಮೂಲಕ, ಪ್ರಾರ್ಥನೆಯ ಮೂಲಕ ಜನ್ಮತಾಳಬೇಕು ಎಂಬುದು. ಹಿಂದೂಶಾಸ್ತ್ರಗಳು ವಿಧಿಸುವ ಹತ್ತು ಸಂಸ್ಕಾರಗಳು ಸುಖಜೀವನಕ್ಕೆ ಸಾಧನಗಳು. ಅವುಗಳಲ್ಲಿ ಮೂರು ಸಂಸ್ಕಾರಗಳನ್ನು ಮಗು ಹುಟ್ಟುವುದಕ್ಕೆ ಮುಂಚೆಯೇ ಮಾಡಬೇಕಾಗುತ್ತದೆ. ಆದ್ದರಿಂದ, ತಂದೆತಾಯಿಗಳಾಗುವುದಕ್ಕೆ ಮುಂಚೆ ತಯಾರಿ ನಡೆಸಬೇಕಾದುದು ಅತ್ಯವಶ್ಯ. ತಯಾರಿ ಎಂದರೆ ಮಗುವಿಗೆ ಬೇಕಾದ ವಸ್ತುಗಳನ್ನು ಕೊಂಡುಕೊಳ್ಳುವುದು ಮತ್ತಿತರ ವ್ಯಾವಹಾರಿಕ ಕಾರ್ಯಗಳಲ್ಲ. ಮನಸ್ಸಿನ ಆಲೋಚನೆಗಳಲ್ಲಿ ಮತ್ತು ಆಚರಣೆಯಲ್ಲಿ ಪರಿಶುದ್ಧತೆಯನ್ನು ಅಭ್ಯಾಸ ಮಾಡುವುದು. ಇದು ಮುಂದೆ ಹುಟ್ಟುವ ಮಗುವಿನಲ್ಲಿ ಒಳ್ಳೆಯ ಸಂಸ್ಕಾರವನ್ನು ಉಂಟುಮಾಡುತ್ತದೆ. ಇದು ಇಡೀ ಕುಟುಂಬದ, ಅದರಲ್ಲೂ ತಾಯಿಯ, ನೈತಿಕ ಹೊಣೆಗಾರಿಕೆ.

ಆದ್ದರಿಂದ ಮಗುವಿನ ಆಕಾಂಕ್ಷೆಯಲ್ಲಿರುವ ತಾಯಂದಿರು **೧. ಯಾವಾಗಲೂ ಹರ್ಷಭರಿತರಾಗಿ ಮತ್ತು ಶಾಂತಿಯ ಭಾವದಲ್ಲಿ ಇರಬೇಕು. ೨. ಪೌಷ್ಟಿಕ ಮತ್ತು ಸಂತುಲಿತ ಆಹಾರವನ್ನು ಸೇವಿಸಿ, ಸಾಕಷ್ಟು ವಿಶ್ರಾಂತಿಯನ್ನು ಪಡೆಯಬೇಕು. ೩. ಪ್ರಾರ್ಥನೆ, ಪೂಜೆ ಮತ್ತು ಆಧ್ಯಾತ್ಮಿಕ ಗ್ರಂಥಗಳ ಅಧ್ಯಯನ – ಇವುಗಳ ಮೂಲಕ ಸಕಾರಾತ್ಮಕ ಚಿಂತನೆ ನಡೆಸಬೇಕು ೪. ತಮ್ಮ ವ್ಯಕ್ತಿತ್ವದ ಭೌತಿಕ, ಮಾನಸಿಕ, ಆಧ್ಯಾತ್ಮಿಕ ಆಯಾಮಗಳನ್ನು ಮೌಲ್ಯಯುತ ಜೀವನದ ಮೂಲಕ ಶ್ರೇಷ್ಠಮಟ್ಟಕ್ಕೆ ಏರಿಸಿಕೊಳ್ಳಬೇಕು.**

(ಕೃಪೆ: *Parents and Teachers in Value Education*, Pub: Ramakrishna Mission, Belur Math) (ಬರಹ: ಸಂ.)

## ಎಲ್ಲ ಧರ್ಮಗಳಿಗೂ ಒಬ್ಬನೇ ಪ್ರಭು!

ಮೊಗಲ್ ಸಾಮ್ರಾಟನಾದ ಔರಂಗಜೇಬನು ತನ್ನ ಮಗನ ಮೇಲೆ ಯಾವುದೋ ಕಾರಣಕ್ಕಾಗಿ ಬಹಳ ಕೋಪಗೊಂಡಿದ್ದ. ತಂದೆಯ ಮೇಲಿನ ಹೆದರಿಕೆಯಿಂದ ಮಗ ದೇಶ ಬಿಟ್ಟು ಇರಾನಿಗೆ ಓಡಿಹೋದ. ಅವನಿಗೆ ಒಬ್ಬಳು ಮಗಳಿದ್ದಳು. ಅವಳ ಹೆಸರು ಶುಚಿತುನ್ನೀಸಾ. ಅವಳ ಭವಿಷ್ಯದ ಬಗ್ಗೆ ಕಾಳಜಿ ವಹಿಸಿದ್ದ ತಂದೆ, ತಾನು ಇರಾನಿಗೆ ಹೋಗುವ ಮೊದಲು, ಅವಳನ್ನು ತನ್ನ ಹಿಂದೂ ಸ್ನೇಹಿತ ದುರ್ಗಾದಾಸ್ ಠಾಕೂರ್ ಎಂಬುವವನ ಬಳಿ ಬಿಟ್ಟು, ಅವಳನ್ನು ಪೋಷಿಸಿ, ಅವಳು ದೊಡ್ಡವಳಾದ ಮೇಲೆ ಬಾದಷಾನಿಗೆ ಒಪ್ಪಿಸಲು ಹೇಳಿದ. ಅದರಂತೆಯೇ ದುರ್ಗಾದಾಸ, ಆ ಹುಡುಗಿಯನ್ನು ತನ್ನ ಸ್ವಂತ ಮಗಳಂತೆಯೇ ಚೆನ್ನಾಗಿ ನೋಡಿಕೊಂಡು, ಅವಳು ದೊಡ್ಡವಳಾದ ಮೇಲೆ ಬಾದಷಾನ ಹತ್ತಿರ ಕರೆದುಕೊಂಡು ಹೋಗಿ ಒಪ್ಪಿಸಿದ.

ಔರಂಗಜೇಬನಿಗೆ ತನ್ನ ಮಗ ಓಡಿಹೋದದ್ದರಿಂದ ತುಂಬ ದುಃಖವಾಗಿತ್ತು. ಈಗ ತನ್ನ ಮೊಮ್ಮಗಳನ್ನು ನೋಡಿ ಸಂತೋಷವಾದರೂ, ಒಬ್ಬ ಕಾಫಿರ (ಮುಸ್ಲಿಂ ಧರ್ಮದಲ್ಲಿ ಶ್ರದ್ಧೆ ಇಲ್ಲದವನು) ಅವಳನ್ನು ಬೆಳೆಸಿದ್ದನ್ನು ತಿಳಿದು ದುಃಖವಾಯಿತು. ಅವನು ತನ್ನ ಮೊಮ್ಮಗಳಿಗೆ ಹೀಗೆ ಹೇಳಿದ: "ಮಗೂ, ನೀನು ಇಷ್ಟು ದಿನ ಒಬ್ಬ ನಾಸ್ತಿಕನ ಹತ್ತಿರ ಬೆಳೆದೆ. ನಿನಗೆ ಇಸ್ಲಾಂ ಧರ್ಮದ ಬಗ್ಗೆ ಮತ್ತು ಅದರ ಆಚಾರಗಳ ಬಗ್ಗೆ ಏನೂ ಗೊತ್ತಿಲ್ಲ. ನೀನು ದೇವರಾದ 'ಅಲ್ಲಾಹು'ವಿನ ಬಗ್ಗೆ ತಿಳಿದುಕೊಳ್ಳಬೇಕು ಹಾಗೂ ಪವಿತ್ರ ಗ್ರಂಥವಾದ ಕುರಾನ್ ಓದಬೇಕು."

ಬಾದಷಾನ ಈ ಮಾತುಗಳು ಶುಚಿತುನ್ನೀಸಾಳಿಗೆ ಸರಿಕಾಣಲಿಲ್ಲ. ಅವಳು ವಿಷಾದದಿಂದ ಹೇಳಿದಳು: "ನೀವು ದುರ್ಗಾದಾಸ್ ಚಿಕ್ಕಪ್ಪನ ಬಗ್ಗೆ ತಪ್ಪಾಗಿ ತಿಳಿದುಕೊಂಡಿದ್ದೀರಿ. ಯಾರು ನನ್ನನ್ನು ಸ್ವಂತ ಮಗಳಂತೆ ಪಾಲನೆ–ಪೋಷಣೆ ಮಾಡಿದನೋ, ಅವನ ಬಗ್ಗೆ ಏಕೆ ನಿಮಗೆ ತಪ್ಪು ಭಾವನೆ ಬರಲು ಸಾಧ್ಯ? ಅವನು ನನ್ನನ್ನು ಹಿಂದೂಗಳ ರೀತಿಯಲ್ಲಿ ಬೆಳೆಸಿರುವನೆಂದು ತಾವು ಭಾವಿಸಿದ್ದರೆ, ಅದು ತಪ್ಪು. ನಾನು ಮುಸ್ಲಿಂ ಆದ ಕಾರಣ, ನನಗೆ ಶಿಕ್ಷಣ ಕೊಡಲು ಅವನು ಒಬ್ಬ ಮುಸ್ಲಿಂ ಮಹಿಳೆಯನ್ನು ನಿಯೋಜಿಸಿದ್ದನೆಂಬುದನ್ನು ನೀವು ಕಲ್ಪಿಸಿಕೊಳ್ಳಲೂ ಆಗದು. ಇನ್ನೂ ನಿಮಗೆ ನಂಬಿಕೆ ಬಾರದಿದ್ದರೆ, ಕುರಾನಿನ ವಾಕ್ಯಗಳನ್ನು ಓದಿ ವಿವರಿಸುತ್ತೇನೆ."

ಮೊಮ್ಮಗಳ ಈ ಮಾತು ಕೇಳಿ, ಔರಂಗಜೇಬನು ಕರಗಿ ಹೋದನು. ಅವನು ದುರ್ಗಾದಾಸನಿಗೆ ಹೇಳಿದನು, "ನಿಜವಾಗಿಯೂ ನೀನು ಮನುಷ್ಯನಲ್ಲ, ದೇವದೂತನೇ ಸರಿ. ನಿನ್ನ ಸ್ನೇಹಿತನ ಮಗಳಲ್ಲಿ ಯಾವ ಭೇದಭಾವವನ್ನೂ ಮಾಡದೆ, ಅವಳ ಸ್ವಂತ ಧರ್ಮಕ್ಕೆ ಅನುಗುಣವಾಗಿ ಬೆಳೆಸಿದ್ದೀಯೆ. ನೀನು ಧನ್ಯ!" ದುರ್ಗಾದಾಸನು ಬಾದಷಾನಿಗೆ ಧನ್ಯವಾದ ಸಲ್ಲಿಸಿ ಹೇಳಿದ, "ನಾವು ಬೇರೆಯವರ ಧರ್ಮವನ್ನು ಭೇದಭಾವದಿಂದ ನೋಡಬಾರದು ಮತ್ತು ಅದನ್ನು ನಮ್ಮ ಧರ್ಮಕ್ಕಿಂತ ಕೀಳಾಗಿ ಕಾಣಬಾರದು ಎಂದು ನನ್ನ ತಂದೆ ನನಗೆ ಹೇಳಿಕೊಟ್ಟಿದ್ದಾರೆ. ನಾವು ನಮ್ಮ ಧರ್ಮವನ್ನು ಬಿಟ್ಟುಬಿಡಬಾರದು. ಹಾಗೆಯೇ ಬೇರೆಯವರನ್ನು ನಮ್ಮ ಧರ್ಮಕ್ಕೆ ತರಲೂ ಪ್ರಯತ್ನಿಸಬಾರದು. ಧರ್ಮಗಳು ಬೇರೆಬೇರೆಯಾಗಿರಬಹುದು. ಆದರೆ ಎಲ್ಲಾ ಧರ್ಮಗಳ ಪ್ರಭು ಒಬ್ಬನೇ. ವಿವಿಧ ಧರ್ಮಗಳ ಅನುಯಾಯಿಗಳು ಅವನನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ. ಎಲ್ಲಾ ಧರ್ಮಗಳೂ ತಮ್ಮ ಅನುಯಾಯಿಗಳಿಗೆ ಉತ್ತಮ ಮಾರ್ಗದಲ್ಲಿ ನಡೆಯುವಂತೆ ಶಿಕ್ಷಣವನ್ನು ಕೊಡುತ್ತವೆ. ಇದರಿಂದಲೇ ನಿಮ್ಮ ಮೊಮ್ಮಗಳಿಗೆ ಇಸ್ಲಾಂ ಧರ್ಮದ ಶಿಕ್ಷಣ ಕೊಡಿಸುವಲ್ಲಿ ನಾನು ಯಾವ ಕೊರತೆಯನ್ನೂ ಮಾಡಲಿಲ್ಲ."

(**ಮೂಲ: ಡಾ. ಶರತ್ ಚಂದ್ರ ಪೆಂಡಾರಕರ ; ಅನುವಾದ: ಸ್ವಾಮಿ ಶಾಂತಿನಾಥಾನಂದ**)